 **ಅಸಲು ದಾವಾ ನಂಃ 80/2024**

**ಪಿ. ಡಬ್ಲ್ಯೂಃ 01 (ಶ್ರೀನಿವಾಸ್)**

**ದಿನಾಂಕಃ 04.06.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ಎಂ ಡಿ ಆರ್., ವಾದಿ ಪರ ವಕೀಲರಿಂದ

ದಿ. 16.05.2009 ರ ಮೂಲ ಕ್ರಯದ ಕರಾರು ಪತ್ರವನ್ನು ನಿಪಿ–1 ಎಂದು, ಸಾಕ್ಷಿಯೂ ಮಾರಾಟಗಾರರ ಎಲ್ಲಾ ಪುಟಗಳಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳ ಪೈಕಿ ಕೊನೆಯ ಪುಟದ ಸಹಿಯನ್ನು ನಿಪಿ–1(ಎ) ಎಂದು, 3 ಪಹಣಿ ಪತ್ರಿಕೆಗಳನ್ನು ಕ್ರಮವಾಗಿ ನಿಪಿ–2 ರಿಂದ 4 ಎಂದು, ಗಣಕೀಕೃತ ಮುಟೇಶನ್ ಪ್ರತಿಯನ್ನು ನಿಪಿ–5 ಎಂದು, ಕಾನೂನು ಬದ್ಧ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ–6 ಎಂದು, ಅಂಚೆ ಲಕೋಟೆಯನ್ನು ನಿಪಿ–7 ಎಂದು, ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ಅದನ್ನು ಒಡೆದು ತೆಗೆಯಲಾಗಿ, ಅದರೊಳಗಿನ ಮೂಲ ನೋಟಿಸನ್ನು ನಿಪಿ–7(ಎ) ಎಂದು, ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ ಪ್ರಕರಣ ಸಂಖ್ಯೆ ಆರ್ ಎ ಪಿ–61/2018 ನೇದ್ದರ ಆದೇಶದ ದೃಢೀಕೃತ ನಕಲನ್ನು ನಿಪಿ–8 ಎಂದು ಗುರುತಿಸಲಾಯಿತು.

ಆದ್ದರಿಂದ ಸದರಿ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.